ಸಂತೈಸಿ ಬಸ್ಸಿನಲ್ಲಿ ಹೋದೆ. ಊರು ಮುಟ್ಟಿದಾಗ ಚುಮುಚುಮು ಬೆಳಕು ಕಣ್ಬಿಡುತ್ತಿತ್ತು. ಬಸ್‌ನಿಲ್ದಾಣದ ಹೊರಗೆ ಕಾರ್ಯಕ್ರಮದ ವಿಶಾಲ ಫ್ಲೆಕ್ಸ್ ಹಾಕಿತ್ತು. ಅದರಲ್ಲಿದ್ದ ಜನರಾಶಿಯಲ್ಲಿ ನನ್ನ ಕುರಿದಲೆಯನ್ನು ಹೇಗೋ ಹುಡುಕಿ ತೆಗೆದೆ. ಭಾಷಣ ಮುಗಿಸಿ ಹಣ್ಣುಹಂಪಲನ್ನು ಶಾಲಲ್ಲಿ ಗಂಟುಕಟ್ಟಿಕೊಂಡು ಸುರಕ್ಷಿತವಾಗಿ ಮನೆ ತಲುಪಿದೆ. ನನ್ನ ಹಿಂದೆಯೇ ಎರಡು ಲಕೋಟೆ ಬಂದವು. ಒಂದರಲ್ಲಿ ಸಂಘದ ಅಧ್ಯಕ್ಷನ ಅವ್ಯವಹಾರ ಬಯಲಿಗೆಳೆಯುವ ಪತ್ರಿಕಾ ವರದಿ. ಹಾಲಿ ಅಧ್ಯಕ್ಷನ ಎದುರು ಸೋಲುಂಡಿದ್ದ ಅಭ್ಯರ್ಥಿಯು ಚೆನ್ನಾಗಿ ಹಣೆದಿದ್ದನು. ಸಾಲದಕ್ಕೆ 'ಅನಾಥರಾದ ಅತಿಥಿ: ಊರಿನ ಮಾನ ಕಳೆದ ಅಧ್ಯಕ್ಷ' ಎಂಬ ತಲೆಬರೆಹದಲ್ಲಿ ಸಂಪಾದಕೀಯವಿತ್ತು. ಎರಡನೆಯ ಲಕೋಟೆಯಲ್ಲಿ ಸಂಘದ ಅಧ್ಯಕ್ಷನ ಧನ್ಯವಾದ ಸಲ್ಲಿಕೆ ಪತ್ರ. ಸನ್ಮಾನ್ಯರೇ ಎಂದು ಶುರುವಾದ ಪತ್ರ ನನ್ನ ಕೃತಘ್ನತೆಯನ್ನು ಎಳೆಎಳೆಯಾಗಿ ವಿಶ್ಲೇಷಿಸಿತ್ತು. ಕೊನೆಯ ಪ್ಯಾರ: 'ಕಡೇಗಳಿಗೆಯಲ್ಲಿ ಯಾರೂ ದೊಡ್ಡವರು ಸಿಗಲಿಲ್ಲ ಎಂದು ಅಷ್ಟೇನು ಸಾಧನೆ ಮಾಡಿರದ ನಿಮ್ಮನ್ನು ಮುಖ್ಯ ಭಾಷಣಕಾರರಾಗಿ ಆಹ್ವಾನಿಸಿ ಉದಾರತೆ ಮೆರೆದೆ. ಆದರೆ ನೀವು? ನನ್ನ ಶತ್ರುಗಳಿಗೆ ಇಲ್ಲದ ಚಾಡಿ ಹೇಳಿ ವರದಿ ಬರೆಸಿದಿರಿ. ದಾನಕ್ಕೆ ದಟ್ಟಿಕೊಟ್ಟರೆ ಹಿತ್ತಲ ಕಡೆ ಹೋಗಿ ಮೊಳಹಾಕಿದರು ಗಾದೆ ನಿಮ್ಮಂತಹವರಿಂದಲೇ ಹುಟ್ಟಿರಬೇಕು. ನಿಮ್ಮ ಮಟ್ಟ ಏನೆಂದು ತೋರಿಸಿದ್ದಕ್ಕೆ ಅನಂತ ಧನ್ಯವಾದಗಳು.'

ನನ್ನ ಅನುಭವದ ಪ್ರಕಾರ, 'ನಮ್ಮ ಹಿತವಚನ ಆಲಿಸಲು ಜನ ಹಸಿದಿಲ್ಲ' ಎಂಬ ಕಟುಸತ್ಯವನ್ನು ಅರಿತಷ್ಟೂ ಭಾಷಣಕಾರರಿಗೆ ದುಃಖದ ಪ್ರಮಾಣ ತಗ್ಗುತ್ತದೆ. ಈ ಸತ್ಯವು ಗ್ರಾಮೀಣ ಭಾಗದ ನೂರು ಜನಪದ ಕಲಾವಿದರ ಸನ್ಮಾನದ ಕಾರ್ಯಕ್ರಮದಲ್ಲಿ ನನಗೆ ಸಿಕ್ಕಿತು. ಅಲ್ಲಿಗೆ ಪ್ರತಿಯೊಬ್ಬ ಕಲಾವಿದನೂ ಸಕುಟುಂಬ ಪರಿವಾರ ಸಮೇತ ಆಗಮಿಸಿದ್ದರಿಂದ ಶಾಮಿಯಾನ ತುಂಬಿ ತುಳುಕಾಡುತ್ತಿತ್ತು. ಪ್ರೈಮರಿ ಶಾಲಾ ಮೈದಾನದಲ್ಲಿ ಕಾರ್ಯಕ್ರಮ. ವೇದಿಕೆಯಲ್ಲಿ ಕುಳಿತವರು ಮೈದಾನದ ನಡುವೆಯಿದ್ದ ಬೇವಿನಮರದ ಕೆಳಗೆ ಕಾಯಿಪಲ್ಲೆ ಬಿಡಿಸುವ, ಅನ್ನ ಬಸಿಯುವ, ಮಿರ್ಚಿ ಕರೆಯಲು ಹಿಟ್ಟುಕಲಸುವ ಚಟುವಟಿಕೆ ನೋಡಬಹುದಿತ್ತು. ಕಾರ್ಯಕ್ರಮ ಮುಗಿದು ಒಟ್ಟಿಗೆ ಹೋದರೆ ಬಡಿಸುವುದಕ್ಕೆ ಕಷ್ಟ ಎಂದು ಸಂಘಟಕರು, ಸನ್ಮಾನ ಸ್ವೀಕರಿಸಿದ ಕಲಾವಿದರು ಊಟಕ್ಕೆ ತೆರಳಬಹುದೆಂದು ಸೂಚನೆ ಕೊಟ್ಟಿದ್ದರು. ಹೀಗಾಗಿ ತಮ್ಮತಮ್ಮ ಸನ್ಮಾನ ಮುಗಿದ ಕೂಡಲೇ ಕಲಾವಿದರು ಮೇಳ ಎಬ್ಬಿಸಿಕೊಂಡು ಊಟಕ್ಕೆ ತೆರಳುತ್ತಿದ್ದರು. ಕೊನೆಯ ಕಲಾವಿದನ ಸನ್ಮಾನ ಆಗುವಾಗ ಸಭೆಯಲ್ಲಿ ಯಾರೂ ಉಳಿದಿರಲಿಲ್ಲ. ದುಡಿದು ನಾಡಿಗೆ ಅನ್ನವಿಕ್ಕುವ ಜನ ಒಂದು ಹೊತ್ತಿನ ಊಟಕ್ಕೆ ಇಷ್ಟು ಆದ್ಯತೆ ಕೊಡುತ್ತಾರೆಯೇ–ಸೋಜಿಗಗೊಂಡೆ. ಊಟದ ಹೊತ್ತಾಗಿರುವುದರಿಂದ ಮುಖ್ಯ ಅತಿಥಿಗಳಿಗೆ ಹೆಚ್ಚಿಗೆ ಹೇಳಲು ಯೋಗ್ಯನಲ್ಲ ಎಂದು ನಿರೂಪಕ ಭಾಷಣಕ್ಕೆ ನನ್ನನ್ನು ಕರೆದನು. ಚಲಿಸುವ ಪ್ರೇಕ್ಷಕರಿಗೆ ಭಾಷಣ ಮಾಡಿ ನನಗೆ ಅಭ್ಯಾಸವಿಲ್ಲ. ಆದರೂ ಜನ ಉಣ್ಣುತ್ತಲೇ ಕೇಳಿಯಾರು ಎಂಬ ನಂಬಿಕೆಯಿಂದ ಮಾತಾಡಿದೆ. ಮರದ ಕೆಳಗೆ ಹರಡಿಕೊಂಡು ಹುಲಿಗಳಂತೆ ಉಣ್ಣುತ್ತಿದ್ದ ಜನಕ್ಕೆ ಭಾಷಣ ಮುಟ್ಟಿತೊ ಇಲ್ಲವೊ. 'ಮತ್ತೋಟು ಅನ್ನ ನೀಡ್ರಿ, ಇಲ್ಲೋಟ ಭಾಜಿ ಹಚ್ಚರೀ, ಯಪ್ಪಾ ಇನ್ನೊಂದು ಲಾಡ ಹಾಕರಿ' ಎಂಬ ಬಾನುಲಿಗಳು ಮಾತ್ರ ವೇದಿಕೆ ತನಕ ಗಂಟೆಹೊಡೆದಂತೆ ಕೇಳುತ್ತಿದ್ದವು.

ನನ್ನ ಭಯಂಕರ ಅಭಿಮಾನಿಯಾದ ಒಬ್ಬ ಅಧ್ಯಾಪಕರೂ ಹೀಗೇ, ಕರೆಸಿಕೊಂಡು ಭಾಷಣಕ್ಕೆ ಕಲ್ಲುಹಾಕಿದರು. 'ನಿಮ್ಮನ್ನು ನೋಡಬೇಕೆಂದು ನಮ್ಮ ವಿದ್ಯಾರ್ಥಿಗಳು ಹಪಹಪಿಸಿದ್ದಾರೆ.